# ಆಹಾ ಸುದ್ದಿ!

★ ಸಸಿತೋಟ



ಟೋಕಿಯೋದ ಕಝುಹಿರೊ ವಟಾನಬೆಯ ಜುಟ್ಟು ಗಿನ್ನೆಸ್ ದಾಖಲೆಯ ಜುಟ್ಟು. ಮೂರು ಅಡಿ ಎಂಟಿಂಚು ಉದ್ದ. ಲಂಬವಾಗಿ ನಿಲ್ಲಿಸಲು ಒಂದು ಕ್ಯಾನ್ ಜೆಲ್, 3 ಕ್ಯಾನ್ ಸ್ಪ್ರೇ ಬೇಕಂತೆ. 25 ವರ್ಷದ ಹುಲುಸಾದ ಬೆಳೆ ಇದು. ಜಪಾನಿನ ಸಮಾಜದ ಕಟ್ಟುಪಾಡುಗಳನ್ನು ಧಿಕ್ಕರಿಸಲು ಬಂಡೆದ್ದ ಈತನಿಗೆ ತನ್ನ ಜುಟ್ಟು ದಾಖಲೆ ಪುಸ್ತಕ ಸೇರಿ ಧ್ಯೇಯವನ್ನೇ ಬುಡಮೇಲು ಮಾಡುತ್ತದೆಂದೇನು ಗೊತ್ತಿತ್ತು!

ರಷ್ಯಾ ಅಧ್ಯಕ್ಷ ಪುಟಿನ್ ಮಾಂಸಖಂಡಗಳನ್ನು ಉಬ್ಬಿಸಿಕೊಂಡು ಹುಲಿ ಪಕ್ಕ, ಶಾರ್ಕ್ ಜೊತೆ ನಿಂತಿರುವ ಚಿತ್ರಗಳಿಂದ ರೋಮಾಂಚಿತರಾಗಿದ್ದರು ಹುಡುಗಿಯರು. ಇದೀಗ ಬಂದ ಸುದ್ದಿ ಆ ರೋಮಾಂಚನಕ್ಕೆ ಗುಂಡುಸೂಜಿ ಚುಚ್ಚಿದೆ. ಅದೆಲ್ಲ ಸ್ಟಂಟ್‌ಗಳು, ಪರಿಸರ ರಕ್ಷಣೆಗೆ ಗಮನ ಸೆಳೆಯಲು ಎಂದು ಕೂಲಾಗಿ ಹೇಳಿರುವ ಪುಟಿನ್ ಈಗ ಕೊಕ್ಕರೆಗಳ ಜೊತೆ ಹಾರಾಡಲು ಹೊರಟಿದ್ದಾರೆ. ಪುಟಿನ್ ಅವರ ಜೊತೆ ಕನಸಲ್ಲಿ ಹಾರಾಡಿದ್ದ ಹುಡುಗಿಯರು ಚಿತ್ರೀಕರಣ ಮುಗಿದ ನಂತರ 'ಪ್ಯಾಕಪ್' ಶೂಟಿಂಗ್ ಸ್ಪಾಟ್ ಆಗಿಬಿಟ್ಟಿದ್ದಾರೆ.



ಈ ಹೈದ ಬಾರ್ ಮೇಲೆ ನಡೆಸುತ್ತಿರುವ ಕಸರತ್ತು ಬಾರ್‌ಬಾರ್ ನೋಡುವಂತೆ ಮಾಡಿದಂತಿದೆ. ನಮ್ಮ ಮೆಜೆಸ್ಟಿಕ್‌ನಲ್ಲಿ ಇಂತಹ ದೊಂಬರಾಟ ನಡೆಸಿ ಕಾಸು ಕಲೆಕ್ಟ್ ಮಾಡುವ ಕಾಯಿಲೆ ದೂರದ ಮೆಕ್ಸಿಕೊ ನಗರಕ್ಕೂ ತಗುಲಿತೋ ಹೇಗೆ? ಆದರೆ ಅಲ್ಲಿ ಇಂತಹ ದೊಂಬರಾಟ ನಡೆಸಲು ಆಡಳಿತವೇ ಕಾಂಚಾಣ ಚೆಲ್ಲುತ್ತಿದೆ. ಮಾದಕ ವಸ್ತು, ಗೂಂಡಾಗಿರಿ ಎಂದು ಅಡ್ಡ ಕಡೆ ಮುಖ ಮಾಡುತ್ತಿದ್ದ ಹುಡುಗರಿಗೆ ಇಂತಹ ಆಕರ್ಷಣೆ ಒಡ್ಡಿದೆ. ಮಾದಕ ದ್ರವ್ಯ ಕೊಡುತ್ತಿದ್ದ ಕಿಕ್ಕೇ ಬೇರೆ, ಸೇತುವೆ ಕೆಳಗೆ ನಡೆಸುವ ಈ ಮಂಗಾಟದ ಮತ್ತೇ ಬೇರೆ ಎಂದು ಈ ಹುಡುಗರಿಗೆ ಗೊತ್ತಾಗಲು ಜಾಸ್ತಿ ದಿನ ಬೇಕಾಗಲಿಕ್ಕಿಲ್ಲ.




ನ್ಯೂಯಾರ್ಕ್‌ನ ಸ್ತ್ರೀವಾದಿಗಳು ಲಿಂಗ ಸಮಾನತೆಗೆ ಈಚೆಗೆ ಹುಯ್ಲಿಟ್ಟರು. ಮನಸ್ಸು ಮುಕ್ತವಾಗಿರಬೇಕೇ? ಹಾಗಾದರೆ ದೇಹಕ್ಕೂ ಮುಕ್ತಿ ಬೇಕು. ಅದಕ್ಯಾಕೆ ಉಡುಪಿನ ಬಂಧನ? ಪುರುಷರು ಸಪಾಟು ಮೇಲ್ಭಾಗ ಬಿಟ್ಟುಕೊಂಡು ಆಪಾಟಿ ಅಡ್ಡಾಡುತ್ತಾರೆ. ಮಹಿಳೆಯರಿಗೆ ಮೇಲುಡುಪು ಇದ್ದರೆ ತಾಜಾ ಗಾಳಿ ಅಡ್ಡಾಡಲು ಅವಕಾಶವೇ ಇರುವುದಿಲ್ಲ ಎಂದು ಬೀದಿಯಲ್ಲಿ 'ಬೇರ್ ವಾಕ್' ಮಾಡಿ ಬೆರಗಾಗಿಸಿದರು. ಹಿನ್ನೆಲೆಯಲ್ಲಿ ಗಿಟಾರ್‌ವಾದಕನ 'ಮುಕ್ತವಾಗಿ ಉಸಿರಾಡಿ' ಎಂಬ ಹಾಡು ಬೇರೆ. ಆಗಾಗ ಇಂತಹ ಪ್ರತಿಭಟನೆ ನಡೆಸಿದರೆ ಉದ್ದೇಶವೂ ಈಡೇರುತ್ತದೆ ಎನ್ನುವ ಗುಟ್ಟು ಗೊತ್ತಿದೆ ಈ ಗಟ್ಟಿಗಿತ್ತಿಯರಿಗೆ.




ಶಾಂಘೈನ ಈ ಕುರ್ಚಿ ಜಂಬೋ ಕುರ್ಚಿ. 22 ಅಡಿ ಎತ್ತರ, ಅಗಲವೋ 25 ಅಡಿ! ಜಗತ್ತಿನಲ್ಲೇ ನನ್ನ ಸಮ ಯಾರಿಲ್ಲ ಎಂಬ ಹಮ್ಮು ಬೇರೆ. ಪ್ರದರ್ಶನಕ್ಕೆ ಬಂದವರೆಲ್ಲಾ ಓರೆಗಣ್ಣಲ್ಲಿ ನೋಡಿ ದೂರ ಹೋಗುವವರೇ. ಪ್ರದರ್ಶನ ಸ್ಥಳ ದೆಹಲಿಗೆ ವರ್ಗಾಯಿಸಿದ್ದರೆ ಕುರ್ಚಿಯ ಮೋಹದ ಎತ್ತರ- ಅಗಲ ಇನ್ನಷ್ಟು ವಿಸ್ತರಿಸುತ್ತಿತ್ತೇನೋ!

ಬೋಸ್ನಿಯಾ ನಗರ ಝುನಿಕಾದಲ್ಲಿ ಮೇಯರ್ ಚುನಾವಣೆ ಬಿಸಿ. ಅಭ್ಯರ್ಥಿ ಮಿರಾಡ್ ಮತದಾರರನ್ನು ಸೆಳೆಯಲು ತನ್ನ ಬ್ಲಾಗ್‌ನಲ್ಲಿ ಹಸಿಬಿಸಿ ಲೈಂಗಿಕ ದೃಶ್ಯಗಳನ್ನು ತುರುಕಿದ್ದಾನೆ. 'ಮಿರಾಡ್‌ಗೆ ಯಾವುದು ಮುಖ್ಯ? ನಿರುದ್ಯೋಗ ನಿವಾರಿಸುವುದೋ, ಬಜೆಟ್ ಕೊರತೆ ನೀಗಿಸುವುದೋ?' ಎಂದು ಮತದಾರ ಕೇಳಿದರೆ, ಮಿರಾಡ್ ಮುಗುಮ್ಮಾಗಿ, 'ನಿಮಗಿದು ಇಷ್ಟವಾದರೆ ನನಗೆ ಮತ ನೀಡಿ' ಎಂದು ಪೋರ್ನ್ ಚಿತ್ರಗಳ ಮೂಲಕ ಈಗಾಗಲೇ ಭವಿಷ್ಯದ ಯೋಜನೆಗಳ ಮುನ್ಸೂಚನೆ ನೀಡಿದ್ದಾನಂತೆ.